# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

**"ಜ್ಞಾನ ಸಂಗಮ" ಬೆಳಗಾವಿ, - 590 018**

ಡಾ. ಆನಂದ ಎಸ್. ದೇಶಪಾಂಡೆ, ಬಿ.ಇ., ಎಂ.ಟೆಕ್., ಪಿಹೆಚ್.ಡಿ
ಕುಲಸಚಿವರು

ದೂರವಾಣಿ ಸಂ: (0831)2405468
ಫ್ಯಾಕ್ಸ್.ಸಂ: (0831) 2405467

---

ಉಲ್ಲೇಖ : ವಿತಾವಿ/ಬೆಳಗಾವಿ/ಪ್ರಸಾರಂಗ/2020-21/4026

ದಿನಾಂಕ : 01 DEC 2020

ಇವರಿಗೆ-

ಪ್ರಾಂಶುಪಾಲರು
ವಿತಾವಿಯ ಸಂಯೋಜಿತ/ಸ್ವಾಯತ್ತ/ಘಟಕ ಕಾಲೇಜುಗಳು.

**ವಿಷಯ:-** ನಮ್ಮ ವಿಶ್ವವಿದ್ಯಾಲಯದಿಂದ ಪ್ರಕಟಿಸಿರುವ ಸಾಂಸ್ಕೃತಿಕ ಕನ್ನಡ ಮತ್ತು ಬಳಕೆ ಕನ್ನಡ ಪಠ್ಯಪುಸ್ತಕಗಳನ್ನು ಖರೀದಿಸುವ " ಕುರಿತು-

ಮಾನ್ಯರೇ,

ಮೇಲ್ಕಾಣಿಸಿದ ವಿಷಯದನ್ವಯ ವೃತ್ತಿಪರ ಶಿಕ್ಷಣದಲ್ಲಿ (ಇಂಜಿನಿಯರಿಂಗ್ ವಿಭಾಗ) ಕನ್ನಡವನ್ನು ಕಡ್ಡಾಯವಾಗಿ ಬೋಧಿಸುವ ಸಲುವಾಗಿ ಘನ ಸರ್ಕಾರದ ಆದೇಶದ ಮೇರೆಗೆ ವಿಶ್ವೇಶ್ವರಯ್ಯಾ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯು, ಪ್ರಸಾರಂಗದ ಮೂಲಕ ಸಾಂಸ್ಕೃತಿಕ ಕನ್ನಡ ( ಕನ್ನಡ ಬಲ್ಲವರಿಗೆ) ಹಾಗೂ ಬಳಕೆ ಕನ್ನಡ (ಕನ್ನಡ ಕಲಿಯದವರಿಗೆ) ಅಧ್ಯಯನಕ್ಕೆಂದು ೨ನೇ ಸೆಮಿಸ್ಟರ್ ಬಿ.ಆರ್ಕಿಟೆಕ್ಚರ್, ಮತ್ತು ೩/೪ ನೇ ಸೆಮಿಸ್ಟರ್ ಬಿ.ಇ/ಬಿ.ಟೆಕ್/ಬಿ.ಪ್ಲಾನ್ ಗೆ ೨೦೧೮ ರ ಯೋಜನೆ ಪ್ರಕಾರ ಸದರಿ ಪುಸ್ತಕಗಳನ್ನು ಸಿದ್ಧಪಡಿಸಿ ಪ್ರಕಟಗೊಳಿಸಿದೆ. ಈ ಪಠ್ಯಪುಸ್ತಕಗಳು ಕಡ್ಡಾಯವಾಗಿದ್ದು ನಿಮ್ಮ ಕಾಲೇಜುಗಳಲ್ಲಿ ಇರುವ ವಿದ್ಯಾರ್ಥಿಗಳ ನೊಂದಣಿಗೆ (registration) ಅನುಗುಣವಾಗಿ ಪುಸ್ತಕಗಳನ್ನು ಖರೀದಿಸಲು ಈ ಮೂಲಕ ಆದೇಶಿಸಲಾಗಿದೆ.

ಸಾಂಸ್ಕೃತಿಕ ಕನ್ನಡ ಪುಸ್ತಕ ಪ್ರತಿ ಒಂದರ ಬೆಲೆ ರೂ.೫೦/-
ಬಳಕೆ ಕನ್ನಡ ಪುಸ್ತಕ ಪ್ರತಿ ಒಂದರ ಬೆಲೆ ರೂ. ೬೦/- ಆಗಿರುತ್ತದೆ.

ಸದರಿ ಪುಸ್ತಕಗಳನ್ನು ಖರೀದಿಸಲು ವಿತಾವಿಯ ವೆಬ್‌ಸೈಟ್ www.prasaranga.vtu.ac.in ಇಲ್ಲಿ ಪುಸ್ತಕ ಖರೀದಿಸುವ ಹಾಗೂ ಹಣ ಪಾವತಿಸುವ ವಿವರಗಳನ್ನು ಹಾಕಲಾಗಿದೆ.ದಿನಾಂಕ 7-12-2020 ರ ಒಳಗೆ ಎಸ್.ಬಿ.ಐ. ಕಲೆಕ್ಟ್ ಮುಖಾಂತರ Prasaranga-Kannada Text Books ಹೆಡ್‌ನ್ನು ಆಯ್ಕೆ ಮಾಡಿ ಹಣವನ್ನು ತುಂಬಿದ ನಂತರ ಹಣ ಪಾವತಿಸಿದ ಮಾಹಿತಿಯನ್ನು ಪೋರ್ಟಲ್‌ನಲ್ಲಿ ದಾಖಲಿಸಬೇಕು. ಇದಾದನಂತರ ವಿತಾವಿಯಿಂದ ಪುಸ್ತಕಗಳನ್ನು ಕಾಲೇಜಿಗೆ ಕಳುಹಿಸಿಕೊಡಲಾಗುವುದು.

ಧನ್ಯವಾದಗಳೊಂದಿಗೆ-

30.11.2020

ಕುಲಸಚಿವರು

ಪ್ರತಿ
೧) ಕುಲಪತಿಗಳ ಆಪ್ತ ಕಾರ್ಯದರ್ಶಿಗಳು,ವಿತಾವಿ ಇವರ ದಯಾಪರ ಅವಗಾಹನೆಗೆ
೨) ಕುಲಸಚಿವರು ಆಪ್ತ ಕಾರ್ಯದರ್ಶಿಗಳು ವಿತಾವಿ ಇವರ ದಯಾಪರ ಅವಗಾಹನೆಗೆ
೩) ಕುಲಸಚಿವರು(ಪರೀಕ್ಷಾಂಗ) ವಿತಾವಿ ಇವರ ದಯಾಪರ ಅವಗಾಹನೆಗೆ
೪) ಹಣಕಾಸು ಅಧಿಕಾರಿಗಳು ವಿತಾವಿ ಇವರ ದಯಾಪರ ಅವಗಾಹನೆಗೆ
೫) ವಿಶೇಷ ಅಧಿಕಾರಿಗಳು, ಸಿ.ಎಸ್.ಸಿ ವಿಭಾಗ ವಿತಾವಿ ಇವರ ಅವಗಾಹನೆಗೆ

Scanned by CamScanner